ಇ) ಸರ್ಕಾರವು, ಪೂರ್ತಿ ರಾಜ್ಯಕ್ಕೆ ವ್ಯತ್ಯಾಸ ದರ ಮತ್ತು ಸಾಗಾಣಿಕೆ ಬಾಕಿ ತೀರುವಳಿಗಾಗಿ ೭.೦೦ ಕೋಟಿ ರೂ.ಗಳನ್ನು ದಿನಾಂಕ ೧೫-೫-೧೯೯೦ರಂದು ಬಿಡುಗಡೆ ಮಾಡಿ ಅದರಲ್ಲಿ ದಿನಾಂಕ ೩೧-೫-೧೯೯೦ರಲ್ಲಿ ಕೋಲಾರ ಜಿಲ್ಲಾಧಿಕಾರಿಗಳಿಗೆ ೩೦.೦೦ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದೆ. (ವ್ಯತ್ಯಾಸ ದರ ರೂ. ೨೮.೦೦ ಲಕ್ಷ ಮತ್ತು ಸಾಗಾಣಿಕೆ ವೆಚ್ಚ ರೂ. ೨.೦೦ ಲಕ್ಷಗಳು).

ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ

೫೬೫. ಶ್ರೀ ಮನೋಹರ ಐನಾಪುರ (ಬಳ್ಳಾಳ್ಳಿ).— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾಳ್ಳಿ ತಾಲ್ಲೂಕಿನಲ್ಲಿರುವ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸುವ ಬಗ್ಗೆ ತೆಗೆದುಕೊಂಡ ಕ್ರಮವೇನು ?

ಆ) ಹಾಗಿದ್ದಲ್ಲಿ ಕ್ರಮವನ್ನು ಪೂರ್ಣಗೊಳಿಸಲು ಎಷ್ಟು ಅವಧಿ ಬೇಕಾಗಬಹುದು ?

ಕೆ. ಹೆಚ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ಬಳ್ಳಾಳ್ಳಿ ಮಂತ ಕ್ಷೇತ್ರದಲ್ಲಿನ ಅರ್ಹ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಕೇಂದ್ರ ಸರ್ಕಾರದ ಸೂಚನೆಯಂತೆ ೧೯೯೧ರ ಜನಗಣತಿ ಕಾರ್ಯವು ಸಂಪೂರ್ಣಗೊಂಡ ನಂತರ ಅವಶ್ಯಕ ಕ್ರಮವನು ಕೈಗೊಳ್ಳಲಾಗುವುದು.

ತುಮಕೂರು ಜಿಲ್ಲೆ ಕ್ಯಾತಸಂದ್ರ ಪೋಲೀಸ್ ಠಾಣೆಯನ್ನು ವರ್ಗಾಯಿಸುವ ಬಗ್ಗೆ

೫೬೬. ಶ್ರೀ ಎಸ್. ಶಫೀ ಅಹ್ಮದ್ (ತುಮಕೂರು).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರು ಜಿಲ್ಲೆ ಕ್ಯಾತಸಂದ್ರ ಪೋಲೀಸ್ ಠಾಣೆಯು ಸಾಕಷ್ಟು ಸ್ಥಳಾವಕಾಶವಿಲ್ಲದ ಕಟ್ಟಡದಲ್ಲಿ ಇರುವುದು ನಿಜವೇ ?

ಆ) ಹಾಗಿದ್ದಲ್ಲಿ, ರಾಷ್ಟ್ರೀಯ ಹೆದ್ದಾರಿಗೆ ಹತ್ತಿರವಾಗಿ ಸಾಕಷ್ಟು ಅನುಕೂಲವಿರುವ ಕಟ್ಟಡಕ್ಕೆ ಇದನ್ನು ವರ್ಗಾಯಿಸಲು ಏನು ಕ್ರಮ ಕೈಗೊಂಡಿರುವಿರಿ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ಕ್ಯಾತಸಂದ್ರ ಸರ್ವೆ ನಂ. ೬೮ ಮತ್ತು ೬೯ರಲ್ಲಿ ನಿವೇಶನವನ್ನು ಪೋಲೀಸ್ ಠಾಣೆ ಕಟ್ಟಡ ಮತ್ತು ಸಿಬ್ಬಂದಿ ವಸತಿ ಗೃಹಗಳ ನಿರ್ಮಾಣಕ್ಕಾಗಿ ಮಂಜೂರಾತಿ ನೀಡುವಂತೆ ತುಮಕೂರು ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ. ಮಂಜೂರಾತಿ ಆದನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ತುಮಕೂರಿನಲ್ಲಿ ಪೋಲೀಸ್ ಸೂಪರಿಂಟೆಂಡೆಂಟ್‌ರವರ ಹೊಸ ಕಛೇರಿ ಕಟ್ಟಡದ ನಿರ್ಮಾಣದ ಬಗ್ಗೆ

೫೬೭. ಶ್ರೀ ಎಸ್. ಶಫೀಅಹ್ಮದ್ (ತುಮಕೂರು).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೯-೯೦ನೇ ಸಾಲಿನಲ್ಲಿ ತುಮಕೂರಿನಲ್ಲಿ ಸೂಪರಿಂಟೆಂಡೆಂಟ್‌ರವರ ಹೊಸ ಕಛೇರಿ ಕಟ್ಟಡದ ನಿರ್ಮಾಣವನ್ನು ಕೈಗೊಳ್ಳುವ ಬಗ್ಗೆ ಪ್ರಸ್ತಾವನೆಯು ಇದ್ದುದು ನಿಜವೇ ?

ಆ) ಹಾಗಿದ್ದಲ್ಲಿ ಕಟ್ಟಡದ ನಿರ್ಮಾಣದ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ವೀರೇಂದ್ರಪಾಟೀಲ್ (ಮುಖ್ಯಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.